## ಪಾಠಕ್ಕೆ ಮೊದಲು ಕಡಲೆಕಾಯಿ!

ಆಸ್ಟ್ರೇಲಿಯಾದಿಂದ ಬಂದಿದ್ದ ರಾಜೇಶ್ವರಿ ಮೇಡಂ 'ಮಹೇಶ್ ಅವರನ್ನು ನೋಡಬೇಕು' ಎಂದರು. ಆ ಸಂಜೆ ಅವರನ್ನು ಕರೆದೊಯ್ದೆ; ಮನೆಯ ತುಂಬಾ ಮಕ್ಕಳಿದ್ದರು, ಮಹೇಶ್ ಪಾಠ ಹೇಳಿಕೊಡುತ್ತಿದ್ದರು. ಭೀಮಾಬಾಯಿ ಮತ್ತು ಯಲ್ಲಮ್ಮ ಅಲ್ಲೇ ಇದ್ದರು, ಅವರ ಪರಿಚಯ ಮಾಡಿಕೊಟ್ಟೆ. ಮನದುಂಬಿ ಬಂದ ರಾಜೇಶ್ವರಿ ಅವರು 'ಇಂತಹ ಬೇರೆ ಮಕ್ಕಳೂ ಇದ್ದಾರಾ?' ಕೇಳಿದರು. ಅಲ್ಲೇ ನಾಲ್ಕೈದು ಮಕ್ಕಳಿದ್ದರು. 'ಅವರ ಫೀಸು ನಾನು ಕಟ್ಟುತ್ತೇನೆ' ಎಂದರು. ಮಾತನಾಡುತ್ತಾ, ಈ ಮಕ್ಕಳಿಗೆ ಪ್ರೊಟೀನ್ ಕೊರತೆ ಎಂದು ತಿಳಿದುಬಂದು, 'ದಿನಕ್ಕೆ 30 ಗ್ರಾಮ್ ಕಡಲೆಕಾಯಿ ತಿಂದರೆ ಸಾಕು, ಅದು ಹೋಗುತ್ತದೆ' ಸಲಹೆ ನೀಡಿದರು.

ರಾಜೇಶ್ವರಿ ಅವರು ಕ್ಲಿನಿಕಲ್ ಡಯಟಿಷಿಯನ್ ಆಗಿದ್ದಾರೆ. ಅವರು ಸಲಹೆ ಮಾತ್ರವಲ್ಲ, ಅದಕ್ಕೆ ಬೇಕಾದ ಆರ್ಥಿಕ ಸಹಾಯವನ್ನೂ ನೀಡಿದರು. ಮಹೇಶ್ ಕಡಲೆಕಾಯಿ ಸಮಾರಾಧನೆ ಆರಂಭಿಸಿಯೇಬಿಟ್ಟರು. ಒಟ್ಟು 109 ಮಕ್ಕಳಿವೆ, ಅವರೆಲ್ಲರಿಗೂ ಮೊದಲಿಗೊಂದು ಪುಟ್ಟ ಸ್ಟೀಲ್ ಡಬ್ಬಿ ನೀಡಿದರು. ಬೆಳಗ್ಗೆ ಬಂದೊಡನೆ, ಆ ಮಕ್ಕಳಿಗೆ ಕಡಲೆಕಾಯಿ ಕೊಡುವರು, ಅದನ್ನು ತಿಂದ ನಂತರ, ಪಾಠ ಆರಂಭ.


ಮಹೇಶ್ ಅವರ ಭೇಟಿಗೆ ಬಂದು, ಮಕ್ಕಳ ಪ್ರೊಟೀನ್ ಕೊರತೆ ನಿವಾರಿಸಿದ ಕ್ಲಿನಿಕಲ್ ಡಯಟಿಷಿಯನ್ ರಾಜೇಶ್ವರಿ

ಅವರ ಮೇಲೆ ಬಂತು. ಆಗ ಅಪ್ಪ ಓರ್ವ ಸ್ಥಿತಿವಂತರ ಮನೆಯಲ್ಲಿ ಜೀತಕ್ಕೆ ನಿಂತರು. ಜೀತದಲ್ಲಿ ಇದ್ದ ಹಾಗೇ ಅವರ ಮದುವೆ ಆಯಿತು. ಅಮ್ಮನಿಗೆ ಆಗ 13–14 ವರ್ಷ ವಯಸ್ಸು' ಎಂದು ಯಲ್ಲಮ್ಮ ವಿವರಿಸಿದಳು.

ಅಪ್ಪನ ಜೀತದಿಂದ ಬರುವ ತಿಂಗಳಿಗೆ 200–300 ರೂಪಾಯಿಯಲ್ಲಿ ಮನೆ ಹೇಗೆ ನಡೆಸುವುದು ಎಂದು ಅಮ್ಮ ಪರದಾಡಿದರು. ಕಡೆಗೆ ಅಮ್ಮನೂ ಹೊಲದ ಕೆಲಸಕ್ಕೆ ಹೋಗತೊಡಗಿದರು. ಜೀತದ ಮನೆಯಲ್ಲಿ ಕೂಡಾ ಪಾತ್ರೆ ಉಜ್ಜುವ ಕೆಲಸ, ಮತ್ತುಳಿದ ಮನೆಕೆಲಸವನ್ನೂ ಮಾಡುವರು. ಈ ತಾಯಿ–ತಂದೆಯರಿಗೆ ಹುಟ್ಟಿದ ಮೊದಲ ಕೂಸು ಗಂಡು. ಈ ಕುಟುಂಬದಲ್ಲಿ ಎರಡನೇ ಮಗುವಾಗಿ ಯಲ್ಲಮ್ಮ 21 ಆಗಸ್ಟ್ 2007ರಂದು ಜನಿಸಿದಳು. ಯಲ್ಲಮ್ಮ ಹುಟ್ಟಿದಾಗ, ಕೂಸಿನ ತೂಕ 1 ಕೇಜಿಯೂ ಇರಲಿಲ್ಲ. 'ಸ್ನಾನ ಮಾಡಿಸಲು, ಅಮ್ಮ ಎರಡು ಕಾಲುಗಳನ್ನು ಚಾಚಿ ಕೂಸನ್ನು ಮಕಾಡೆ ಮಾಡಿ ಮಲಗಿಸುವಾಗ, ಕಾಲಿನ ನಡುವಿನ ಸಂದಿಯಲ್ಲಿ ಜಾರುವಷ್ಟು ನಾನು ಸಣ್ಣಗಿದ್ದೆನಂತೆ' ಎಂದು ಯಲ್ಲಮ್ಮ ಹೇಳಿದಳು.

ಮಗು ಬಲು ಕ್ಷೀಣವಿತ್ತು. ಅಪ್ಪ, 'ಇದು ಸಾಯುತ್ತೆ, ಇನ್ನೊಂದು ಮಗು ಬೇಕು' ಎಂದರು. 'ಸತ್ತರೂ ಪರವಾಗಿಲ್ಲ, ನನಗೆ ಇನ್ನು ಮಕ್ಕಳು ಬೇಡ' ಎಂದು ಅಮ್ಮ ಹಟ ಹಿಡಿದಳು. ಅಷ್ಟು ಎಳೆಯ ವಯಸ್ಸಿಗೆ ಆದ ಮದುವೆ ಮತ್ತು ಎರಡು ಮಕ್ಕಳು, ಆಕೆಯ ದೇಹವನ್ನು ಜರ್ಜರಿತವಾಗಿಸಿದ್ದವು.

ಮಗುವಿಗೆ ಮೊಲೆ ಚೀಪಲೂ ಆಗದಷ್ಟು ನಿಶ್ಶಕ್ತಿ. ಹತ್ತಿ ಬತ್ತಿಯಲ್ಲಿ ಹಾಲನ್ನು ಕುಡಿಸುತ್ತಿದ್ದರು. ಮಗುವಿಗೆ ವಿಪರೀತದ ರಕ್ತಹೀನತೆಯಾದಾಗ, ಅಮ್ಮ ಸಾಲ ಮಾಡಿ ಪೇಟೆಗೆ ಓಡಿ ಬಂದಳು. ಮಗುವನ್ನು ಆಸ್ಪತ್ರೆಗೆ ಸೇರಿಸಿದಳು. 'ಎ' ಪಾಸಿಟಿವ್ ರಕ್ತ ಬೇಕಿತ್ತು. ಕೊಡಲು ಯಾರೂ ಮುಂದೆ ಬರಲಿಲ್ಲ. ''ಆಸ್ಪತ್ರೆಯಲ್ಲಿ ಎಲ್ಲರ ಕಾಲಿಗೆ ಬಿದ್ದು ಅಮ್ಮ ಮಗುವಿಗೆ ರಕ್ತ ಕೊಡಲು ಬೇಡುತ್ತಿದ್ದರೆ, ಅಪ್ಪ ಕೋಪದಲ್ಲಿ, ಇದು ಸಾಯುತ್ತೆ ಇನ್ನೇನಕ್ಕೆ ಎಡತಾಕ್ತೀಯ ಅಂತ ಕೂಗಾಡಿ, ನನ್ನನ್ನು ತೆಗೆದು ಎಸೆದಿದ್ದರಂತೆ. ಅದನ್ನು ನೋಡಿದ, ಅಲ್ಲಿಗೆ ಬಂದ ಯಾರೋ ಟೀಚರ್ ತಂದೆಗೆ ಚೆನ್ನಾಗಿ ಬೈಯ್ದು, 'ನಾನು ರಕ್ತ ಕೊಡ್ತೇನೆ' ಎಂದು ಮುಂದೆ ಬಂದರಂತೆ''. ಯಲ್ಲಮ್ಮ ತನ್ನದಲ್ಲದ ಕಥೆ ಹೇಳುತ್ತಿರುವಷ್ಟು ಸಮಾಧಾನದಿಂದ ಬಿತ್ತರಿಸಿದಳು.

'ಮೇಡಂ ನಾನು ಆ ಟೀಚರ್ ಹೆಸರು ತಿಳಿದುಕೊಳ್ಳೋಕೆ ತುಂಬಾ ಪ್ರಯತ್ನ ಪಡ್ತಾ ಇದ್ದೀನಿ', ತನ್ನ ಜೀವ ಉಳಿಸಿದ ಆ ವ್ಯಕ್ತಿ ಯಾರೆಂದು ತಿಳಿದುಕೊಳ್ಳುವ ಹಂಬಲ ಈ ಪುಟ್ಟ ಹುಡುಗಿಗೆ. ಮನಸ್ಸಲ್ಲೇ ಅವರನ್ನು ಸ್ಮರಿಸಿ ಕೃತಜ್ಞತೆ ಹೇಳುತ್ತಾಳೆ.

ಮಗು ರೋಗಿಷ್ಟವಾಗಿತ್ತು. ಹಳ್ಳಿಯಲ್ಲಿ ಆಸ್ಪತ್ರೆ ಇರಲಿಲ್ಲ. ಪೇಟೆಗೆ, ಅಂದರೆ ರಾಯಚೂರಿಗೆ ಬರಲು ಹಣವಿಲ್ಲ. ಅಮ್ಮ ಅವರಿವರಲ್ಲಿ ಗಂಡನಿಗೆ ಗೊತ್ತಿಲ್ಲದ ಹಾಗೆ ಸಾಲ ಮಾಡಿ ಬರುತ್ತಿದ್ದರು. ಸಾಲ ಮಾಡಿದ್ದೀನಿ ಎಂದು ತಿಳಿದರೆ ಈ ರೋಗಿಷ್ಟ ಕೂಸಿಗೆ ಅಪ್ಪ ಏನು ಮಾಡುವರೋ ಎಂಬ ಭೀತಿ ಅಮ್ಮನಿಗೆ. ಆದರೆ ಸಾಲ, ಆಸ್ಪತ್ರೆಯ ಓಡಾಟ ಅಪ್ಪನಿಂದ ಎಷ್ಟು ದಿನ ಮುಚ್ಚಿಡಲು ಸಾಧ್ಯವಿತ್ತು? ಅಪ್ಪ ಇಲ್ಲೇ ಇದ್ದರೆ, ಕೂಸು ಕಾಯಿಲೆ ಬಿದ್ದಾಗ ಆಸ್ಪತ್ರೆಗೆ ಬರಲು ಆಗುವುದಿಲ್ಲ ಎಂದು, ಅಪ್ಪನನ್ನು ಅಮ್ಮ 'ಬೆಂಗಳೂರಿಗೆ ಹೋಗಿ ದುಡಿ' ಅಂತ ಕಳುಹಿಸಿದರು. ಆದರೆ ಇಲ್ಲಿ ಬೆಂಗಳೂರಿಗೆ ಒಬ್ಬರೇ ದುಡಿಯಲು ಬಂದ ಅಪ್ಪ, ಕುಡಿಯುವುದನ್ನು ಕಲಿತು ಬಿಟ್ಟರು. 'ನಾನು ಇಲ್ಲೇ ಇದ್ರೆ ಅವರು ಕುಡಿದು ಹಾಳಾಗ್ತಾರೆ' ಅಂತ, ಅಮ್ಮ ನನ್ನನ್ನು ಅಮ್ಮನ ತಾಯಿ ಹತ್ತಿರ, ಅಣ್ಣನನ್ನು ಅಪ್ಪನ ತಾಯಿ ಹತ್ತಿರ ಬಿಟ್ಟು ಬೆಂಗಳೂರಿಗೆ ಬಂದರು. ನನಗೆ ಆಗ ಒಂದು ವರ್ಷ, ಅಣ್ಣಂಗೆ ಎರಡು ಇರಬೇಕು'


ಐಎಎಂಗೆ ಸೇರುವ ಹಂಬಲದ ಯಲ್ಲಮ್ಮ

ಎಂದು ಯಲ್ಲಮ್ಮ ಹೇಳಿದಳು. ಬೆಂಗಳೂರಿಗೆ ಬಂದ ಅವರು, ಭೀಮಾಬಾಯಿಯ ಕುಟುಂಬವಿದ್ದ ಆ ಬಡಪ್ರದೇಶದಲ್ಲಿಯೇ ತಗಡಿನ ಜೋಪಡಿ ಹಾಕಿಕೊಂಡಿದ್ದರು.

ಅಜ್ಜಿಯ ಆರೈಕೆಯಲ್ಲಿ ಪುಟ್ಟ ಕೂಸು ಯಲ್ಲಮ್ಮ ಬೆಳೆದಳು. ಮನೆಯಲ್ಲಿ ಅಜ್ಜಿ ಮತ್ತು ಕೂಸು ಇಬ್ಬರೇ. ಯಲ್ಲಮ್ಮ ನಾಲ್ಕನೇ ಕ್ಲಾಸ್ ತನಕ ಹಳ್ಳಿಯಲ್ಲಿ ಅಜ್ಜಿಯ ಮನೆಯಲ್ಲಿಯೇ ಓದಿದಳು. ಒಂದು ದಿನ ಅಜ್ಜಿಗೆ ಹುಷಾರು ತಪ್ಪಿತ್ತು. ಅವರಿದ್ದ ಜೋಪಡಿ ತಗಡಿನ ಶೆಡ್ ಆಗಿತ್ತು. ಆಗೊಂದು ದಿನ ಯಾವನೋ ಜೋಪಡಿಯೊಳಕ್ಕೆ ನುಗ್ಗಿ ಬಂದು, ಅಜ್ಜಿಯನ್ನು ಕೆಡವಿ, ಅವಳ ಬಳಿ ಇದ್ದ ಚಿನ್ನದ ಒಂದೇ ಒಂದು ಒಡವೆಯನ್ನೂ ಕಿತ್ತುಕೊಂಡು ಓಡಿ ಹೋದ. ವಿಷಯ ತಿಳಿದ ಅಮ್ಮ ಗಾಬರಿಯಾಗಿ, ಮಗಳು ಅಲ್ಲೇ ಇದ್ದರೆ ಏನಾದರೂ ಆಗಿಬಿಡಬಹುದು ಎಂದು ಹೆದರಿ ಬೆಂಗಳೂರಿಗೆ ಕರೆತಂದು ಐದನೇ ಕ್ಲಾಸಿಗೆ ಸೇರಿಸಿದಳು. ಇಲ್ಲಿ ಸರ್ಕಾರಿ ಶಾಲೆಯಲ್ಲಿ ಯಲ್ಲಮ್ಮನಿಗೆ ಭೀಮಾಬಾಯಿ ಸಹಪಾಠಿ. ಸಮಾನ ಕಷ್ಟಗಳನ್ನು ಎದುರಿಸುತ್ತಿದ್ದ ಇವರು ಬಲುಬೇಗ ಸ್ನೇಹಿತರಾದರು.

'ಅಪ್ಪ ದುಡಿದದ್ದೆಲ್ಲ ಅರ್ಧ ಕುಡಿತಕ್ಕೆ, ಇನ್ನರ್ಧ ಆತನದೇ ಖರ್ಚಿಗೆ ಸಾಕಾಗುತ್ತಿತ್ತು. ಮನೆ ನೋಡಿಕೊಂಡದ್ದೆಲ್ಲ ಅಮ್ಮನೆ. ಅಮ್ಮ ದುಡಿದದ್ದನ್ನೂ ಅಪ್ಪ ಕೇಳ್ತಾರೆ. ಅಮ್ಮ ಮೊದಲು ಗಾರೆ ಕೆಲಸಕ್ಕೆ ಹೋಗುತ್ತಿದ್ದರು. ಆದರೆ ಒಮ್ಮೆ ಬಿದ್ದುಬಿಟ್ಟು ಮೂಳೆ ಮುರಿದು, ಗಾರೆ ಕೆಲಸ ಕಷ್ಟವಾಯಿತು. ಈಗ ಮನೆ ಕೆಲಸಕ್ಕೆ ಹೋಗುತ್ತಾರೆ. ಅಪ್ಪ ಹೇಳ್ತಾರೆ, ಹೆಣ್ಣುಮಕ್ಕಳು ಓದಿ ಏನು ಪ್ರಯೋಜನ ಅಂತ, ಆದರೆ ಅಮ್ಮ, ನೀನು ಓದು ಅಂತಾರೆ' ಎಂದು ಯಲ್ಲಮ್ಮ ಹೇಳಿದಳು.

ಬೆಳಗ್ಗೆ ಯಲ್ಲಮ್ಮನೂ 6 ಗಂಟೆಗೆ ಮಹೇಶ್ ಅವರಲ್ಲಿ ಉಚಿತ ಟ್ಯೂಷನ್‌ಗೆ ಶಾಲೆಯ ಸಮವಸ್ತ್ರದಲ್ಲಿಯೇ ಬರುತ್ತಾಳೆ. ಟ್ಯೂಷನ್ ಮುಗಿದ ಮೇಲೆ, ಒಂದು ಮನೆಯ ಕೆಲಸ ಮಾಡಿ ಶಾಲೆಗೆ ಓಡುತ್ತಾಳೆ. ಶಾಲೆಯಿಂದ ಬಂದಾಗ ಅಮ್ಮನ ಜೊತೆಗೇ ಮನೆಗೆಲಸಕ್ಕೆ ಹೋಗುತ್ತಿದ್ದಳು, ಅಮ್ಮನಿಗೆ ಒಂದಿಷ್ಟು ಸಹಾಯ ಆಗಲಿ ಎಂದು ಆಕೆಯ ಆಸೆ. ಅಮ್ಮ 'ಬೇಡ, ನೀನು ಓದಿಕೋ' ಅಂದರೂ ಕೇಳುತ್ತಿರಲಿಲ್ಲ.